ಮಂಡಿಸಿದೆ.

ವಿಷಯ:- Improvements to roads and drains Attur village in Chitra Layout surrounding in ward no:03

****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವಾರ್ಡ್ ನಂ-03, ಅಟ್ಟೂರು ರ ವ್ಯಾಪ್ತಿಯಲ್ಲಿ ಬರುವ ಅಟ್ಟೂರು ಗ್ರಾಮದ ಚಿತ್ರ ಬಡಾವಣೆಯಲ್ಲಿ ರಸ್ತೆಗಳು ಮತ್ತು ಚರಂಡಿಗಳು ತುಂಬಾ ಹಾಳಾಗಿರುತ್ತದೆ ಹಾಗೂ ಮಳೆಗಾಲ ಸಂಭವಿಸಿದಾಗ, ಚರಂಡಿಯಲ್ಲಿ ನೀರು ಸರಾಗವಾಗಿ ಹರಿಯದೆ ರಸ್ತೆಯ ಮೇಲೆ ಹರಿದು ಬರುತ್ತದೆ ಹಾಗೂ ಸದರಿ ಬಡಾವಣೆಯ ರಸ್ತೆಗಳಲ್ಲಿ ನೀರು ನಿಂತು ವಾಹನ ಸಂಚಾರಕ್ಕೂ ಸಹ ತುಂಬಾ ತೊಂದರೆಯಾಗುವುದಾಗಿ ಸಾರ್ವಜನಿಕರು ಮೇಲ್ಕಂಡ ಪ್ರದೇಶಗಳ ರಸ್ತೆಗಳನ್ನು ಸರಿಪಡಿಸಿಕೊಡಲು ಹಾಗೂ ವಾಹನಗಳು ಓಡಾಡಲು ಅನುಕೂಲಮಾಡಿಕೊಡುವಂತೆ ಯಲಹಂಕ ವಿಧಾನಸಭಾ ಕ್ಷೇತ್ರದ ಮಾನ್ಯ ಶಾಸಕರು ಮತ್ತು ಬಿ.ಬಿ.ಎಂ.ಪಿ ಸದಸ್ಯರುಗಳು ಮನವಿಯನ್ನು ಸಲ್ಲಿಸಿರುತ್ತಾರೆ. ಸದರಿ ಕಾಮಗಾರಿಯನ್ನು 2020ನೇ ಸಾಲಿನ **P-1878 18per-Works (Bhagyajyothi Sooru / Neeru Yojane and General)** ಕಾರ್ಯಕ್ರಮದಲ್ಲಿ ಸೇರಿಸಿ ಸಾರ್ವಜನಿಕರಿಗೆ ಅನುಕೂಲಮಾಡಿಕೊಡುವಂತೆ ತಿಳಿಸಿರುತ್ತಾರೆ.

(1)

ಅದರಂತೆ, ಸ್ಥಳ ಪರಿವೀಕ್ಷಣೆ ಮಾಡಿ ಈ ಮೇಲ್ಕಂಡ ಕಾಮಗಾರಿಯನ್ನು 2020ನೇ ಸಾಲಿನ **P-1878 18per-Works (Bhagyajyothi Sooru / Neeru Yojane and General)** ಅನುದಾನದಡಿಯಲ್ಲಿ ರೂ.99.00ಲಕ್ಷಗಳಿಗೆ ಅಂದಾಜು ಪಟ್ಟಿಯನ್ನು ಲೋಕೋಪಯೋಗಿ ಇಲಾಖೆ 2018-19ನೇ ಸಾಲಿನಲ್ಲಿ ಮಂಜೂರಾಗಿರುವ ದರಪಟ್ಟಿಯಂತೆ ತಯಾರಿಸಲಾಗಿದೆ. ಸದರಿ ಅಂದಾಜು ಪಟ್ಟಿಯಲ್ಲಿ ಈ ಕೆಳಕಂಡ ಅಂಶಗಳು ಒಳಗೊಂಡಿರುತ್ತದೆ.

(2)

1. ಮಣ್ಣನ್ನು ಅಗೆಯುವುದು ಮತ್ತು ಅಗೆದ ಮಣ್ಣನ್ನು ಹೊರಸಾಗಿಸುವುದು.
2. ಸಿ.ಸಿ.1:3:6 ನ್ನು ಅಳವಡಿಸುವುದು.
3. ಸಿ.ಸಿ.ಎಂ.20 ನ್ನು ಅಳವಡಿಸುವುದು.
4. ಟಿ.ಎಂ.ಟಿ ಸ್ಟೀಲನ್ನು ಅಳವಡಿಸುವುದು.
5. ಆರ್.ಸಿ.ಸಿ.ಪ್ರೀ ಕ್ಯಾಸ್ಟ್ ಕವರಿಂಗ್ ಸ್ಲಾಬ್‌ನ್ನು ಅಳವಡಿಸುವುದು.
6. ಸಿ.ಸಿ.1:1.5:3 ನ್ನು ಅಳವಡಿಸುವುದು ಇತ್ಯಾದಿ...,

ಮೇಲ್ಕಂಡ ಎಲ್ಲಾ ಅಂಶಗಳು ಸದರಿ ಕಾಮಗಾರಿಗೆ ಬಹಳ ಅವಶ್ಯಕವಾಗಿರುತ್ತದೆ. ಆದ್ದರಿಂದ ಇವುಗಳನ್ನು ಅಳವಡಿಸಿ ಅಂದಾಜು ಪಟ್ಟಿಯನ್ನು ತಯಾರಿಸಲಾಗಿದೆ. ಈ ಕಾಮಗಾರಿಗೆ 2020ನೇ ಸಾಲಿನ **P-1878 18per-Works (Bhagyajyothi Sooru / Neeru Yojane and General)** ಅಡಿಯಲ್ಲಿ 003-20-000265 ರಂತೆ ಕಾಮಗಾರಿಯ ಸಂಕೇತ ದೊರೆತಿದ್ದು, ಕೆಲಸವನ್ನು ತುರ್ತಾಗಿ ತೆಗೆದುಕೊಳ್ಳಬೇಕಾಗಿರುವುದರಿಂದ ಈ ಅಂದಾಜು ಪಟ್ಟಿಗೆ ಆಡಳಿತಾತ್ಮಕ ಹಾಗೂ ತಾಂತ್ರಿಕ ಮಂಜೂರಾತಿ ಕೋರಿ ಕಡತವನ್ನು ತಮ್ಮ ಮುಂದಿನ ಆದೇಶಕ್ಕೆ ಮಂಡಿಸಿದೆ.

(3)

ಸ.ಅ (ವಾರ್ಡ್-ನಂ.03)

ಸ.ಕಾ.ಅ (ಯ.ಉ.ವಿ)

(4) ಸ.ಅ (ಯೋ.ವಿ)

ಟಿಪ್ಪಣಿಗಳು ಮತ್ತು ಆಜ್ಞೆಗಳು

ಪುಟ್ಟಿಯ ಸಂಖ್ಯೆ

ಕಂಡಿಕೆ (1) ಮತ್ತು (3) ರಲ್ಲಿ ವಿವರಿಸಿರುವಂತೆ 2019-20ನೇ ಸಾಲಿನ ಕಾಮಗಾರಿಯನ್ನು P.-1878 18-Per ಯಲ್ಲಿ (Bhagya Jyothi Scheme/New Yojane) ಅಡಿಯಲ್ಲಿ ವಾರ್ಡ್ ನಂ-03 ಕ್ಕೆ ರೂ 99.00 ಲಕ್ಷಗಳ ಕ್ರಿಯಾಯೋಜನೆಯಲ್ಲಿ, ಸದರಿ ಕ್ರಿಯಾಯೋಜನೆಯಲ್ಲಿ "Improvements to roads and drains at Atrur Village in Chitra Layout and Surrounding in ward No-03" ಎಂಬ ಶೀರ್ಷಿಕೆಯನ್ನು ಸೇರಿಸಿದಲು Job ಸಂಖ್ಯೆ: 003-20-00127 ಎಂತೆ Job ಸಂಖ್ಯೆ ಪಡೆಕೊಳ್ಳಲಿಕ್ಕೆ ಕ್ರಮವಹಿಸಿ ಸದರಿ ಶೀರ್ಷಿಕೆಯನ್ನು ಪೋಸ್ಟ್ ಮಾಡಿ ಸದರಿ ಕಾಮಗಾರಿಯನ್ನು ಕೈಗೊಳ್ಳಲು ಕ್ರಮವಹಿಸಲು ಹಾಗೂ ಸದರಿ ಕಾಮಗಾರಿಯ ಅಂದಾಜು ಪಟ್ಟಿಯನ್ನು ತಯಾರಿಸಿದ್ದು, ಪ್ರಸ್ತಾಪಿತ ಕಾಮಗಾರಿಯನ್ನು ಇತರೆ ಸರ್ಕಾರದ/ಕೇಂದ್ರ ಸರ್ಕಾರ/ಪಾಲಿಕೆಯ ಯಾವುದೇ ಅನುದಾನದಲ್ಲಿ ಕೈಗೆತ್ತಿಕೊಂಡಿರುವುದಿಲ್ಲವೆಂದು ಕಾರ್ಯಪಾಲಕ ಅಭಿಯಂತರರು ದೃಢೀಕರಿಸಿದ್ದು, ರಸ್ತೆ ಇನ್ವೆಂಟರಿ ಹಾಗೂ ಕಾಮಗಾರಿ ಸ್ಥಳದ GEO stamped photo ಲಗತ್ತಿಸಿದ್ದು, ಅಂದಾಜುಪಟ್ಟಿಗೆ ಆದಳಿತಾತ್ಮಕ ಅನುಮೋದನೆ ನೀಡಲು ಕೋರಿ ಕಡತ ಮಂಡಿಸಿದ್ದು, ಮಾನ್ಯ ಆಯುಕ್ತರ ಅಧಿಕಾರ ಪ್ರತ್ಯಾಯೋಜನೆ ನಡವಳಿಗಳ ದಿನಾಂಕ:25-09-2019ರಂತೆ ಆಡಳಿತಾತ್ಮಕ ಅನುಮೋದನೆ ಮಾನ್ಯ ವಲಯ ಆಯುಕ್ತರು ರವರಿಗೆ ಸಲ್ಲಿಸಲು ಕೋರಿ ಕಡತವನ್ನು ಸಲ್ಲಿಸಿದೆ.

15-6-2020

(5) ಮುಖ್ಯ ಲೆಕ್ಕಾಧಿಕಾರಿಗಳು (ಆಯ)

Executive Engineer
B.B.M.P Division
Yelahanka

ಪುಟ್ಟಿಯ ಸಂಖ್ಯೆ

(6)

ಪಂಕ್ತಿಯ ಸಂಖ್ಯೆ	ಟಿಪ್ಪಣಿಗಳು ಮತ್ತು ಆಜ್ಞೆಗಳು
6	ಮೇಲ್ಕಂಡ ಪ್ರಸ್ತಾವನೆಯನ್ನು ಅವಗಾಹಿಸಿದೆ. ವಾರ್ಡ್ ಸಂಖ್ಯೆ: 03 ರ ಯಲಹಂಕ ಉಪನಗರ ಅತ್ತೂರು ವ್ಯಾಪ್ತಿಯಲ್ಲಿ Improvements to roads and drains Attur village in Chitra Layout surrounding in ward no 03 ಕಾಮಗಾರಿಗೆ ಸಂಬಂಧಪಟ್ಟ ಅಭಿಯಂತರರು ಆಡಳಿತಾತ್ಮಕ ಅನುಮೋದನೆಯನ್ನು ಕೋರಿರುತ್ತಾರೆ.
7	ಈ ಮೇರೆಗೆ ಕಡತವನ್ನು ಅವಲೋಕಿಸಲಾಗಿದ್ದು, ಪ್ರಸ್ತಾಪಿಸಿರುವ ಕಾಮಗಾರಿಯ ಅಂದಾಜು ಮೊತ್ತ ರೂ.99.00 ಲಕ್ಷಗಳಿಗೆ 2019-20 ನೇ ಸಾಲಿನ ಆಯವ್ಯಯದ ಲೆಕ್ಕಶೀರ್ಷಿಕೆ ಪಿ-1878 ಅಡಿಯಲ್ಲಿ ಸಂಖ್ಯೆ: 003-20-000265 ರಂತೆ ಕಾಮಗಾರಿ ಸಂಕೇತ ಪಡೆದುಕೊಂಡಿದ್ದು, ಈ ಕೆಳಕಂಡ ದಾಖಲಾತಿಗಳನ್ನು ಲಗತ್ತಿಸಿ/ದೃಢೀಕರಿಸಿರುತ್ತಾರೆ. 1)ಕಾಮಗಾರಿ ನಿರ್ವಹಿಸಿರುವ ಸ್ಥಳದ GIS/Geo mapping ಛಾಯಚಿತ್ರಗಳು 2)Road Inventory ದಾಖಲಾತಿಗಳು. 3)ಪ್ರಸ್ತಾಪಿತ ಕಾಮಗಾರಿಯನ್ನು ಯಾವುದೇ ಅನುದಾನದಲ್ಲಿ ಕೈಗೊಂಡಿರುವುದಿಲ್ಲ ಹಾಗೂ ಪುನರಾವರ್ತನೆಯಾಗಿರುವುದಿಲ್ಲ ಎಂಬ ಬಗ್ಗೆ ದೃಢೀಕರಣ.
8	ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ, ಸಹಾಯಕ ಅಭಿಯಂತರರು ವಾರ್ಡ್ ಸಂಖ್ಯೆ 03, ಸ.ಕಾ.ಪಾ.ಅಭಿಯಂತರರು ಯಲಹಂಕ ಉಪನಗರ ಉಪವಿಭಾಗ, ಕಾರ್ಯಪಾಲಕ ಅಭಿಯಂತರರು ಯಲಹಂಕ ವಿಭಾಗ ಮತ್ತು ಮುಖ್ಯ ಅಭಿಯಂತರರು ಯ.ವ ರವರು ಶಿಫಾರಸ್ಸು ಮಾಡಿದ್ದು, ಆಡಳಿತಾತ್ಮಕ ಅನುಮೋದನೆ ನೀಡಲು ಕೋರಲಾಗಿದೆ. ಜಂಟಿ ಆಯುಕ್ತರು ಯಲಹಂಕ ವಲಯ,ಬಿಬಿಎಂಪಿ ಜಂಟಿ ಆಯುಕ್ತರು ಯಲಹಂಕ ವಲಯ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಬ್ಯಾಟರಾಯನಪುರ, ಬೆಂಗಳೂರು-92.
9	ಮಾನ್ಯ ವಲಯ ಆಯುಕ್ತರು ಮತ್ತು ವಿಶೇಷ ಆಯುಕ್ತರು(ಯೋಜನೆ)

ಜಂಟಿ ಆಯುಕ್ತರು ಕಛೇರಿ
ಯಲಹಂಕ ವಲಯ, ಬಿಬಿಎಂಪಿ
ಬ್ಯಾಟರಾಯನಪುರ, ಬೆಂಗಳೂರು-92.
ನಂ. 494/ವಿಷಯ/ಜಂ.ಆ/ಯ.ವ/2019-20 ದಿನಾಂಕ 14/6/2019

ವಿಶೇಷ ಆಯುಕ್ತರು (ಯೋಜನೆ) ಬಿ.ಬಿ.ಎಂ.ಪಿ. ದಿನಾಂಕ 20/6/2019 ಪ್ರ 881

ಪಂಕ್ತಿಯ ಸಂಖ್ಯೆ

ಪ್ರಸ್ತಾವನೆಯು, ವಾರ್ಡ್-03 ರ ವ್ಯಾಪ್ತಿಯಲ್ಲಿ "Improvements to roads and drains Attur village in chitra layout surrounding in ward No.03" ಕಾಮಗಾರಿಗೆ ಮುಖ್ಯ ಅಭಿಯಂತರರು (ಯಲಹಂಕ ವಲಯ) ಮತ್ತು ಜಂಟಿ ಆಯುಕ್ತರು (ಯಲಹಂಕ ವಲಯ) ರವರು ಆಡಳಿತಾತ್ಮಕ ಅನುಮೋದನೆ ಕೋರಿರುವುದಾಗಿರುತ್ತದೆ.

10) ಈ ಮೇರೆಗೆ ಕಡತವನ್ನು ಅವಲೋಕಿಸಲಾಗಿ, ಪ್ರಸ್ತಾಪಿಸಿರುವ ಕಾಮಗಾರಿಯ ಅಂದಾಜು ಮೊತ್ತ ರೂ.೮೯.೦೦ ಲಕ್ಷಗಳಿಗೆ 2019-20 ನೇ ಸಾಲಿನ ಆಯವ್ಯಯದ ಲೆಕ್ಕಶೀರ್ಷಿಕೆ ಪಿ-1878 ಅಡಿಯಲ್ಲಿ ಸಂಖ್ಯೆ:003-20-000265 ರಂತೆ ಕಾಮಗಾರಿ ಸಂಕೇತ ಪಡೆದುಕೊಂಡಿದ್ದು, ಈ ಕೆಳಕಂಡ ದಾಖಲಾತಿಗಳನ್ನು ಲಗತ್ತಿಸಿ / ಧೃಢೀಕರಿಸಿರುತ್ತಾರೆ.

1) ಕಾಮಗಾರಿ ನಿರ್ವಹಿಸಿರುವ ಸ್ಥಳದ *GIS – Geo mapping* ಭಾಯಾಚಿತ್ರಗಳು.
2) *Road Inventory* ದಾಖಲಾತಿಗಳು.
3) ಪ್ರಸ್ತಾಪಿತ ಕಾಮಗಾರಿಯನ್ನು ಯಾವುದೇ ಅನುದಾನದಲ್ಲಿ ಕೈಗೊಂಡಿರುವುದಿಲ್ಲ ಹಾಗೂ ಪುನರಾವರ್ತನೆಯಾಗಿರುವುದಿಲ್ಲ ಎಂಬ ಬಗ್ಗೆ ಧೃಢೀಕರಣ.

11) ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ಜಂಟಿ ಆಯುಕ್ತರು (ಯಲಹಂಕ ವಲಯ) ರವರ ಶಿಫಾರಸ್ಸಿನ ಮೇರೆಗೆ ಪ್ರಸ್ತಾಪಿಸಿರುವ ಕಾಮಗಾರಿಗೆ ಈ ಕೆಳಕಂಡ ಷರತ್ತುಗೊಳಪಟ್ಟು, ಮಾನ್ಯ ಆಯುಕ್ತರವರ ಅಧಿಕಾರ ಪ್ರತ್ಯಾಯೋಜನೆ ನಡವಳಿಗಳ **ಸಂಖ್ಯೆ:ಜಿ12 (1)/ಪಿಆರ್/394/2019-2020, ದಿನಾಂಕ:25-09-2019 ರಂತೆ ಆಡಳಿತಾತ್ಮಕ ಆಡಳಿತಾತ್ಮಕ ಅನುಮೋದನೆ ನೀಡುವ ಪ್ರಸ್ತಾವನೆಯನ್ನು ಅನುಮೋದಿಸಿದೆ.**

1) ಕಾಮಗಾರಿಯನ್ನು ಅನುಷ್ಠಾನಗೊಳಿಸುವ ಪೂರ್ವದಲ್ಲಿ, ಆಯುಕ್ತರವರ ಕಛೇರಿ ಆದೇಶ ಸಂಖ್ಯೆ:ಮುಲೆಅ/ಆಯವ್ಯಯ/-2019-20/ಪಿಆರ್/11/2018-19, ದಿನಾಂಕ:12-08-2019 ಮತ್ತು ಆಯುಕ್ತರವರ ಆಂತರಿಕ ಕಛೇರಿ ಟಿಪ್ಪಣಿ ಸಂಖ್ಯೆ:ಜಿಜಿಎಂಪಿ/ತ/ಪಿ.ಆರ್/5287/ 2019-2020, ದಿನಾಂಕ:05-11-2019 ರಲ್ಲಿನ ನಿರ್ದೇಶನಗಳನ್ನು / ಪ್ರಕ್ರಿಯೆಗಳನ್ನು ಅನುಸರಿಸಿರುವ ಬಗ್ಗೆ ಧೃಢಪಡಿಸಿಕೊಳ್ಳುವುದು.
2) ಕಾಮಗಾರಿಯನ್ನು ಅನುಷ್ಠಾನಗೊಳಿಸುವ ಕುರಿತು, ಕಡತದಲ್ಲಿ ಲಗತ್ತಿಸಿರುವ Geo-tagged ಭಾಯಾಚಿತ್ರಗಳಲ್ಲಿ ಗುರುತಿಸಿರುವ ನಿರ್ದಿಷ್ಟ ಪ್ರದೇಶಗಳಲ್ಲಿ ಮಾತ್ರ ಕಾಮಗಾರಿಯನ್ನು ಕೈಗೊಳ್ಳುವುದು.
3) ರಸ್ತೆ ಇತಿಹಾಸವನ್ನು ನಿರ್ವಹಿಸುವ ಬಗ್ಗೆ ಸರ್ಕಾರವು ಹೊರಡಿಸಿರುವ ಸಂಖ್ಯೆ:ನಅಇ/248/ಎಂಎನ್‌ವೈ/2019, ದಿನಾಂಕ:22-10-2019 ರ ಆದೇಶದಲ್ಲಿನ ಸೂಚನೆಗಳನ್ನು ಕಡ್ಡಾಯವಾಗಿ ಪಾಲಿಸುವುದು.

ವಿಶೇಷ ಆಯುಕ್ತರು (ಯೋಜನೆ)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಜಂಟಿ ಆಯುಕ್ತರು (ಯಲಹಂಕ)

ಜಂಟಿ ಆಯುಕ್ತರು ಕಛೇರಿ
ಯಲಹಂಕ ವಲಯ, ಜಿಬಿಎಂಪಿ
ದಿನಾಂಕ 29/11/2019
ಸ್ಯಾಟಲೈಟ್ ಟೌನ್, ಬೆಂಗಳೂರು-92

(13)

(14)

ಸಂಕ್ಷಿಪ್ತ ಸಂಖ್ಯೆ	ಕಡತದ ಸಂಖ್ಯೆ .....
	ಟಿಪ್ಪಣಿಗಳು ಮತ್ತು ಆಜ್ಞೆಗಳು

ಕಂಡಿಕೆ (03) ರಲ್ಲಿ ಸಹಾಯಕ ಕಾರ್ಯಪಾಲಕ ಅಭಿಯಂತರರು ಯಲಹಂಕ ಉಪನಗರ ಉಪ ವಿಭಾಗರವರು ಮಾಡಿರುವ ಪ್ರಸ್ತಾವನೆಯಂತೆ, 2019–20ನೇ ಸಾಲಿನ ಲೆಕ್ಕಶೀರ್ಷಿಕೆ ಪಿ–1878ರ (18per – work(Bhagyajyothi, Sooru/Neeru Yojane and General)(54 Lakhs/new wards) ಅನುದಾನದಡಿ ಮಂಜೂರಾಗಿರುವ ವಾರ್ಡ್ ನಂ:3ರ ವ್ಯಾಪ್ತಿಯಲ್ಲಿ ಮೂಲಭೂತ ಸೌಕರ್ಯಗಳು ನಿರ್ಮಿಸುವ ಕಾಮಗಾರಿಯನ್ನು ಕೈಗೊಳ್ಳಲು 2018–19ನೇ ಸಾಲಿನ ಲೋಕೋಪಯೋಗಿ ಇಲಾಖೆ ಎಸ್.ಆರ್ ದರಪಟ್ಟಿಯನ್ನು ಅನುಸರಿಸಿ ರೂ.99.00 ಲಕ್ಷಗಳಿಗೆ ಅಂದಾಜುಪಟ್ಟಿಯನ್ನು ತಯಾರಿಸಲಾಗಿದ್ದು, ಸದರಿ ಅಂದಾಜು ಪಟ್ಟಿಗೆ ಈಗಾಗಲೇ ಕಾಮಗಾರಿ ಸಂಕೇತ:003–20–000265 ದೊರೆತಿದ್ದು, ಮಾನ್ಯ ಆಯುಕ್ತರವರು ಅಧಿಕಾರ ಪ್ರತ್ಯಾಯೋಜಿಸಿ ಹೊರಡಿಸಿರುವ ಆದೇಶ ಸಂಖ್ಯೆ :ಬಿ12(1) ಪಿ.ಆರ್/394/2019–20 ದಿನಾಂಕ: 25–2–2019 ರಂತೆ ನೀಡಿರುವ ಅಧಿಕಾರದನ್ವಯ ಮಾನ್ಯ ವಿಶೇಷ ಆಯುಕ್ತರು, ಬಿಬಿಎಂಪಿ ರವರು ಕಂಡಿಕೆ(11)ರಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಿರುತ್ತಾರೆ. ಅದರಂತೆ ಆಡಳಿತಾತ್ಮಕ ಅನುಮೋದನೆ ಟಿಪ್ಪಣಿಗೆ ಸಹಿ ಮಾಡಿದೆ. ಹಾಗೂ ಸದರಿ ಕಾಮಗಾರಿಗೆ ತಾಂತ್ರಿಕ ಮಂಜೂರಾತಿ ಹಾಗೂ ಡಿ.ಟಿ.ಎಸ್. ಅನುಮೋದನೆ ನೀಡಲು ತಮ್ಮ ಮುಂದಿನ ಆದೇಶ ಕೋರಿ ಸಲ್ಲಿಸಿದೆ.

ಕಾರ್ಯಪಾಲಕ ಅಭಿಯಂತರರು
ಯಲಹಂಕ ವಿಭಾಗ

(14) ಮೇಲಿನ ಪ್ರಸ್ತಾವನೆಯಂತೆ (ಯು)

15) ತಾಂತ್ರಿಕ ನಿಕಾಯ(ಎ)

ಕಂಡಿಕೆ (13)ರ ಕಾರ್ಯಪಾಲಕ ಅಭಿಯಂತರರು (ಯಲಹಂಕ)ರವರ ವರದಿಯನ್ನು ತಮ್ಮ ಅವಗಾಹನೆಗ ಸಲ್ಲಿಸಿದೆ Improvements to roads and drains at Attur village in chithra layout surrounding in ward no-03.ಕಾಮಗಾರಿಯನ್ನು ನಿರ್ವಹಿಸಲು ರೂ 99.00ಲಕ್ಷಗಳಿಗೆ 2018–19ನೇ ಸಾಲಿನ ಪಿ–1878ರ ಅಡಿಯಲ್ಲಿ ಜಾಬ್ ಸಂಕೇತ:003–20–000265ದೊರೆತಿದ್ದು, ಕಾರ್ಯಪಾಲಕ ಅಭಿಯಂತರರು (ಯಲಹಂಕ)ರವರು ಪ್ರಸ್ತಾಪಿತ ಕಾಮಗಾರಿಗೆ ತಾಂತ್ರಿಕ ಅನುಮೋದನೆ ಕೋರಿ ಕಡತ ಸಲ್ಲಿಸಿರುತ್ತಾರೆ.

ಸದರಿ ಕಾಮಗಾರಿಯನ್ನು ನ ಯಾವುದೇ ಲೆಕ್ಕಶೀರ್ಷಿಕೆ ಅಡಿಯಲ್ಲಿ ಕೈಗೊಂಡಿರದ ಬಗ್ಗೆ ಪರಿಶೀಲಿಸಿಕೊಂಡು Overlap ಆಗದಂತೆ ಹಾಗೂ ದಿನಾಂಕ:13–12–2019ರ ಮಾನ್ಯ ಆಯುಕ್ತರು ರವರ ಆದೇಶದನ್ವಯ ಅಂದಾಜು ಪಟ್ಟಿಯಲ್ಲಿ ಅಗತ್ಯ ಅಂಶಗಳನ್ನು ಅಳವಡಿಸಿಕೊಂಡು ಸೂಕ್ತ ಕ್ರಮವಹಿಸಿ, ಪ್ರಸ್ತಾಪಿತ ಕಾಮಗಾರಿಗಳನ್ನು ನಿಮಯಾನುಸಾರ ಅನುಷ್ಠಾನಗೊಳಿಸಲು ಕಾರ್ಯಪಾಲಕ ಅಭಿಯಂತರರು ಯಲಹಂಕ ವಿಭಾಗ ರವರಿಗೆ ಸೂಚಿಸಲಾಗಿದ್ದು, ಮಾನ್ಯ ಆಯುಕ್ತರು ರವರ ಅಧಿಕಾರ ಪ್ರತ್ಯಾಯೋಜನೆ ಆದೇಶ ಸಂಖ್ಯೆ ಬಿ12(1)ಪಿಆರ್/394/201–20,ದಿನಾಂಕ:25–09–2019ರಂತೆ ತಾಂತ್ರಿಕ ಅನುಮೋದನೆ ನೀಡುವ ಸಂಬಂಧ ತಮ್ಮ ಮುಂದಿನ ಆದೇಶಕ್ಕಾಗಿ ಕೋರಿ ಮಂಡಿಸಿದೆ.

16) ಮು.ಲ(ಅವ)

ಮುಖ್ಯ ಅಭಿಯಂತರರು

ಪು.ತಿ.ನೋ

ಕಡ(ಎಲ್ಲೆ)

ಸಂಖ್ಯೆ

ಮಂಡಿಸಿದೆ.

ವಿಷಯ:- Improvements to roads and drains at attur village and chithra layout surrounding areas in ward no-03. ಎಂಬ ಕಾಮಗಾರಿಯ ತಾಂತ್ರಿಕ ಬಿಡ್‌ಅನ್ನು ಅನುಮೋದಿಸಿ ಆರ್ಥಿಕ ಬಿಡ್‌ಅನ್ನು ತೆರೆಯಲು ಅನುಮತಿ ನೀಡುವ ಬಗ್ಗೆ.

ಉಲ್ಲೇಖ:

1. ಕಾಮಗಾರಿ ಟೆಂಡರ್ ಪ್ರಕಟಣೆ ಸಂಖ್ಯೆ: BBMP/ED/YNK.D/ E-PMT/ 04 /2020-21 dated 11-08-2020

* * * * *

(17) ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, 2019-20ನೇ ಸಾಲಿನ ಲೆಕ್ಕಶೀರ್ಷಿಕೆ ಬಿ-1878 ರಲ್ಲಿ (Bhagyajyothi Sooru/Neeru Yojane and General) ಪರಿಶಿಷ್ಟ ಜಾತಿ /ಪರಿಶಿಷ್ಟ ಪಂಗಡದ ಜನಾಂಗಕ್ಕೆ ವಾರ್ಡ್ ನಂ-03ರಲ್ಲಿ ಮೀಸಲಿಟ್ಟಿರುವ ಅನುದಾನದಡಿಯಲ್ಲಿ ಈ ಕೆಳಕಂಡ ಕಾಮಗಾರಿಯನ್ನು ಕೈಗೊಂಡು ನಿರ್ವಹಿಸಲು ರೂ. 99.00 ಲಕ್ಷಗಳಿಗೆ ಜಾಬ್ ನಂಬರ್ 003-20-000265 ರಂತೆ ದೊರೆತಿರುತ್ತದೆ. ವಿವರ ಈ ಕೆಳಕಂಡಂತಿದೆ.

Sl No	Ward No	P Code	Job number	Name of work	Est Cost Rs in Lakhs
1	3	1878	003 20 000265	Improvements to roads and drains at attur village and chithra layout surrounding areas in ward no-03.	99.00

(18) ಈ ಮೇಲ್ಕಂಡ ಕಾಮಗಾರಿಗೆ 2018-19ನೇ ಸಾಲಿನ ಲೋಕೋಪಯೋಗಿ ಇಲಾಖೆ ದರಪಟ್ಟಿಗಳನ್ವಯ ಹಾಗೂ ಪರಿಷ್ಕೃತ ದರಗಳನ್ವಯ ರೂ.99.00 ಲಕ್ಷಗಳಿಗೆ ಅಂದಾಜು ಪಟ್ಟಿಯನ್ನು ತಯಾರಿಸಿದ್ದು, ಮುಖ್ಯ ಅಭಿಯಂತರರು ಯಲಹಂಕ ವಲಯರವರು ಸಂಖ್ಯೆ ಬೃ.ಬೆಂ.ಮ.ಪಾ/ಮು.ಅ/ತಾ.ಸಂ/ಯ.ವ./ಪ್ರ.ಆರ್/42/2020-21 ದಿನಾಂಕ:01-07-2020 ರಂತೆ ತಾಂತ್ರಿಕ ಮಂಜೂರಾತಿಯನ್ನು ಮತ್ತು ಕರಡು ಟೆಂಡರ್ ಶೆಡ್ಯೂಲ್-ಬಿ ಗೆ ಅನುಮೋದನೆ ನೀಡಿರುತ್ತಾರೆ.

ಈ ಮೇಲ್ಕಂಡ ಕಾಮಗಾರಿಗೆ ಸಂಬಂಧಿಸಿದಂತೆ ಉಲ್ಲೇಖ (1)ರಂತೆ ದಿನಾಂಕ: 11-08-2020 ರಂದು KTPP Act and KW-3 Standard Tender Document ಅನುಸಾರ E-Procurement ಮುಖಾಂತರ ಟೆಂಡರ್ ಕರೆಯಲ್ಲು, ಸದರಿ ಟೆಂಡರ್ ಪ್ರಕಟಣೆಯನ್ನು ಸಾರ್ವಜನಿಕ ಸಂಪರ್ಕಾಧಿಕಾರಿಗಳ ಮುಖಾಂತರ ವಿಜಯವಾಣಿ ಮತ್ತು The Times of India ದಿನ ಪತ್ರಿಕೆಯಲ್ಲಿ ದಿನಾಂಕ: 12-08-2020, ರಂದು ಪ್ರಕಟಿಸಲಾಗಿರುತ್ತದೆ.

(19) ಸದರಿ ಟೆಂಡರ್‌ನ ವಿವರಗಳು ಈ ಕೆಳಕಂಡತಿರುತ್ತದೆ.

ಕ್ರ.ಸಂ	ಅಂಶಗಳು	ವಿವರಗಳು
1	ಕೆಲಸದ ಹೆಸರು	Improvements to roads and drains at attur village and chithra layout surrounding areas in ward no-03.
2	ಅಂದಾಜು ಮೊತ್ತ	ರೂ. 99.00 ಲಕ್ಷಗಳು

ಸಂಖ್ಯೆ

ಟಿಪ್ಪಣಿಗಳು ಮತ್ತು ಆಜ್ಞೆಗಳು

3	ಇಂಡೆಂಟ್ ನಂ	BBMP/2020-21 / OW/ Work_ INDENT _44200.
3	ಅನುದಾನದ ಯೋಜನೆ ಹೆಸರು	2019–20ನೇ ಸಾಲಿನ (Bhagyajyothi Sooru/Neeru Yojane and General)
4	ಲೆಕ್ಕಶೀರ್ಷಿಕೆ	ಪಿ– 1878
5	ಆಡಳಿತಾತ್ಮಕ ಅನುಮೋದನೆ	ವಲಯ ಆಯುಕ್ತರು ಯಲಹಂಕ ವಲಯರವರಿಂದ ಪಡೆಯಲಾಗಿದೆ.
6	ತಾಂತ್ರಿಕ ಮಂಜೂರಾತಿ ಮೊತ್ತ	ರೂ. 99.00 ಲಕ್ಷಗಳು
7	ತಾಂತ್ರಿಕ ಮಂಜೂರಾತಿ ಸಂಖ್ಯೆ	ಸಂಖ್ಯೆ ಬೃ.ಬೆಂ.ಮ.ಪಾ/ ಮು.ಅ/ ತಾ.ಮಂ/ ಯ.ವ./ಪಿ.ಆರ್/42/2020–21 ದಿನಾಂಕ. 01–07–2020. ರಂತೆ
8	ಟೆಂಡರ್‌ಗೆ ಇಟ್ಟ ಮೊತ್ತ	ರೂ. 87.52 ಲಕ್ಷಗಳು
9	ಟೆಂಡರ್‌ನ ಪೂರ್ವ ಭಾವಿ ಸಭೆ	21–8–2020 ರಂದು ಸಂಜೆ 3.00 ಗಂಟೆಗೆ.
10	ಅನ್ ಲೈನ್ ಇ–ಪ್ರಕ್ಯೂರ್ ಮೆಂಟ್ ಮುಖಾಂತರ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ	1-9-2020 upto 16.00 hrs
11	ಅನ್ ಲೈನ್ ಇ–ಪ್ರಕ್ಯೂರ್ ಮೆಂಟ್ ಮುಖಾಂತರ ಟೆಂಡರ್ ತೆರೆಯುವ ದಿನಾಂಕ	2-9-2020 after 16.00 hrs

(20) ಮೇಲ್ಕಂಡ ಟೆಂಡರ್ ಪ್ರಕಟಣೆಗೆ ಸಂಬಂದಿಸಿದಂತೆ ದಿನಾಂಕ: 2–9–2020 ರಂದು ಟೆಂಡರ್‌ಅನ್ನು ತೆರೆಯಲಾಗಿದ್ದು, ಸದರಿ ಟೆಂಡರ್‌ನಲ್ಲಿ ಇಬ್ಬರೂ ಗುತ್ತಿಗೆದಾರರು ಬಾಗವಹಿಸಿದ್ದು, ಗುತ್ತಿಗೆದಾರರ ವಿವರಗಳು ಈ ಕೆಳಕಂಡಂತಿರುತ್ತದೆ.

1. Sri Kothanda raju (Sri Charan Constructions)
2. Sri Venkataraju K

ಮೇಲ್ಕಂಡ ಗುತ್ತಿಗೆದಾರರು ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ಭಾಗವಹಿಸಿದ್ದು, Sri Kothanda raju (Sri Charan Constructions) and Sri Venkataraju K ರವರು ತಲಾ ರೂ. 2.00 ಲಕ್ಷ ಇ.ಎಂ.ಡಿ ಮೊತ್ತವನ್ನು – ಇ ಪ್ರಕ್ಯೂರ್‌ಮೆಂಟ್‌ನಲ್ಲಿ ಮುಖಾಂತರ ಪಾವತಿಸಿರುತ್ತಾರೆ. ಅದರಂತೆ ಮೇಲ್ಕಂಡ ಇಬ್ಬರೂ ಗುತ್ತಿಗೆದಾರರು ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ಸಲ್ಲಿಸಿರುವ ಎಲ್ಲಾ ದಾಖಲಾತಿಗಳನ್ನು ಪರಿಶೀಲಿಸಲಾಗಿದ್ದು, KW-3 Standard Tender Document ಅನುಸಾರ ನಿಗದಿಪಡಿಸಿರುವ ಎಲ್ಲಾ ಷರತ್ತುಗಳಂತೆ ತಾಂತ್ರಿಕ ಮೌಲ್ಯ ಮಾಪನದಲ್ಲಿ ಅರ್ಹತೆ ಹೊಂದಿರುತ್ತಾರೆ. (ತಾಂತ್ರಿಕ ಮೌಲ್ಯಮಾಪನದ ವಿವರಗಳು ಮತ್ತು ತುಲಾನಾತ್ಮಕ ಪಟ್ಟಿಯನ್ನು ಕಡತದಲ್ಲಿ ಲಗತ್ತಿಸಿದೆ.)

(21) ಮೇಲಿನ ವಿವರಗಳನ್ನು ತಮ್ಮ ಅವಗಾಹನೆಗೆ ತರುತ್ತಾ ಸದರಿ ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸಿ ತಾಂತ್ರಿಕ ಮೌಲ್ಯ ಮಾಪನದಲ್ಲಿ ಅರ್ಹತೆ ಹೊಂದಿರುವ ಬಿಡ್‌ದಾರರಾದ Sri Kothanda raju (Sri Charan Constructions) and Sri Venkataraju K ರವರ ತಾಂತ್ರಿಕ ಬಿಡ್‌ಅನ್ನು ಅನುಮೋದಿಸಲು ಕೋರಿ ಕಡತವನ್ನು ತಮ್ಮ ಮುಂದಿನ ಆದೇಶಕ್ಕಾಗಿ ಮಂಡಿಸಿದೆ.

18/09/2020

ಕಾರ್ಯಪಾಲಕ ಅಭಿಯಂತರರು
ಯಲಹಂಕ ವಿಭಾಗ

(22) ಮುಖ್ಯ ಅಭಿಯಂತರರು (ಯಲಹಂಕ ವಲಯ)

ಮುಖ್ಯ ಅಭಿಯಂತರರು
ಯಲಹಂಕ ವಲಯ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಪ್ರತಿಸೋ

(23) E.E(yelahanka)

ಯಲಹಂಕ ವಿಭಾಗದ ವ್ಯಾಪ್ತಿಯ ವಾರ್ಡ್ ಸಂಖ್ಯೆ: 03ರಲ್ಲಿ 2019-20ನೇ ಸಾಲಿನ ಲೆಕ್ಕಶೀರ್ಷಿಕೆ ಪಿ-1878 ರಡಿ (Bhagyajyothi Sooru/Neeru Yojane and General) ಪರಿಶಿಷ್ಟ ಜಾತಿ /ಪರಿಶಿಷ್ಟ ಪಂಗಡದ ಜನಾಂಗಕ್ಕೆ ವಾರ್ಡ್ ನಂ-03ರಲ್ಲಿ ಮಿಸಲಿಟ್ಟಿರುವ ಅನುದಾನದಡಿಯಲ್ಲಿ ಈ ಮೆಲ್ಕಂಡ ಕಾಮಗಾರಿಯನ್ನು ಕೈಗೊಂಡು ನಿರ್ವಹಿಸಲು ಒಟ್ಟು ಅಂದಾಜು ಮೊತ್ತ ರೂ.99.00 ಲಕ್ಷಗಳಿಗೆ ದಿನಾಂಕ: 11-8-2020 ರಂದು ಡ್ರಿ-ಲಕೋಟೆ ಪದ್ಧತಿಯಲ್ಲಿ ಇ-ಪ್ರಕ್ಯೂರ್‌ಮೆಂಟ್ ಮುಖಾಂತರ ಟೆಂಡರ್ ಕರೆಯಲಾಗಿರುತ್ತದೆ.

(24) ಸದರಿ ಟೆಂಡರ್‌ನಲ್ಲಿ ಇಬ್ಬರೂ ಗುತ್ತಿಗೆದಾರರಾದ Sri Kothanda raju (Sri Charan Constructions) and Sri Venkataraju K ರವರು ಇಬ್ಬರೂ ಭಾಗವಹಿಸಿ ಟೆಂಡರ್‌ನಲ್ಲಿ ನಿಗಧಿಪಡಿಸಿದ ಷರತ್ತುಗಳಂತೆ ಅರ್ಜ ದಾವಿಲಾತಿಗಳನ್ನು ಸಲ್ಲಿಸಿರುತ್ತಾರೆ. ಸದರಿ ಗುತ್ತಿಗೆದಾರರು ತಾಂತ್ರಿಕವಾಗಿ ಅರ್ಹತೆ ಹೊಂದಿರುವುದರಿಂದ ಸದರಿಯವರ ತಾಂತ್ರಿಕ ಬಿಡ್‌ಅನ್ನು ಅನುಮೋದಿಸಿ ಆರ್ಥಿಕ ಬಿಡ್‌ಅನ್ನು ತೆರೆಯಲು ಮುಖ್ಯ ಅಭಿಯಂತರರು ಯಲಹಂಕ ವಲಯರವರು ,ಕಂದಿಕೆ ( )ರಲ್ಲಿ ಅನುಮೋದನೆ ನೀಡಿರುತ್ತಾರೆ. ಅದರಂತೆ ತಾಂತ್ರಿಕವಾಗಿ ಅರ್ಹರಾಗಿರುವ ಇಬ್ಬರೂ ಬಿಡ್ದುದಾರರ ಆರ್ಥಿಕ ಬಿಡ್‌ಅನ್ನು ತೆರೆಯಲಾಗಿದ್ದು, ವಿವರ ಈ ಕೆಳಕಂಡಂತಿರುತ್ತದೆ.

ಕ್ರ ಸಂ	ಗುತ್ತಿಗೆದಾರರ ಹೆಸರು	ಟೆಂಡರ್‌ನಿಷ್ಟ ಮೊತ್ತಕ್ಕೆ ಮೊಲಿಸಿದಾಗ ಕೋಡದವರು	ಟೆಂಡರ್ ನಿಷ್ಟ ಮೊತ್ತವನ್ನು 1-7-2020ರ ಪಜಿಷ್ಟ ದರಗಳಿಗೆ ಹೊಲಿಸಿದಾಗ	ಗುತ್ತಿಗೆ ದಾರರು ನಮೂದಿಸಿರುವ ದರಗಳು	ಟೆಂಡರ್‌ನಿಷ್ಟ ಮೊತ್ತಕ್ಕೆ ಹೊಲಿಸಿದಾಗ ಕೋಡವರು	ದಿನಾಂಕ: 1-7-2020ರ ಪಜಿಷ್ಟ ದರಗಳಿಗೆ ಹೋಲಿಸಿದಾಗ ಕೋಡ	ಷರಾ
01	Sri Kothanda raju (Sri Charan Constructions)	87,52,208.04	85,75,635.07	91,55,867.58	(+)4.61%	(+)6.76%	
02	Sri Venkataraju K			92,58,416.71	(+)5.78%	(+)7.96%	

ಮೇಲ್ಕಂಡ ಇಬ್ಬರೂ ಗುತ್ತಿಗೆದಾರರು ಸಲ್ಲಿಸಿರುವ ಆರ್ಥಿಕ ಬಿಡ್‌ಅನ್ನು ಪರಿಶೀಲಿಸಲಾಗಿ Sri Kothanda raju (Sri Charan Constructions ರವರು ನಮೂದಿಸಿರುವ ರೂ. **91,55,867.58** ಗಳು ಅತಿ ಕಡಿಮೆ ದರಗಳಾಗಿರುತ್ತದೆ.

ಆದುದರಿಂದ ಗುತ್ತಿಗೆದಾರರಾದ Sri Kothanda raju (Sri Charan Constructions ರವರು ನಮೂದಿಸಿರುವ ರೂ. **91,55,867.58** ಗಳು ಅತಿ ಕಡಿಮೆ ದರಗಳಾಗಿದ್ದು, ಅನುಮೋದಿತ ಅಂದಾಜು ಪಟ್ಟಿಯ 2018-19 ಸಾಲಿನ ದರಗಳಿಗೆ ಹೋಲಿಸಿದಾಗ ಶೇಕಡ (+) 4.61% ರಷ್ಟು ಹಾಗೂ ದಿನಾಂಕ: 01-07-2020ರಂತೆ ಪರಿಷ್ಕೃತ ದರಪಟ್ಟಿಗೆ ತುಲನೆ ಮಾಡಿದಾಗ ಶೇಕಡ (+)6.76% ರಷ್ಟು ಹೆಚ್ಚಾಗಿರುತ್ತದೆ. ಆದುದರಿಂದ ಸದರಿ ಟೆಂಡರ್‌ನಲ್ಲಿ ಅರ್ಹ ಗುತ್ತಿಗೆದಾರರಾದ Sri Kothanda raju (Sri Charan Constructions ರವರು ನಮೂದಿಸಿರುವ ದರ ರೂ. **91,55,867.58** ಗಳನ್ನು ಟೆಂಡರ್‌ಗಿಟ್ಟ ಮೊತ್ತಕ್ಕೆ ಹೊಲಿಸಿದಾಗ ಶೇಕಡ (+) 4.61% ರಷ್ಟು ಹೆಚ್ಚಾಗಿದ್ದು, ಗುತ್ತಿಗೆದಾರರು ಸಲ್ಲಿಸಿರುವ ದರಗಳಿಗೆ ಅನುಮೋದನೆ ಕೋರಿ ಕಡತವನ್ನು ತಮ್ಮ ಮುಂದಿನ ಆದೇಶಕ್ಕಾಗಿ ಮಂಡಿಸಿದೆ.

(25)

24/09/2020
ಕಾರ್ಯಪಾಲಕ ಅಭಿಯಂತರರು
ಯಲಹಂಕ ವಿಭಾಗ

(26) ಮುಖ್ಯ ಅಬಿಯಂತರರು (ಯಲಹಂಕ ವಲಯ)

ಗುತ್ತಿಗೆ ಸಂಸ್ಥೆಯು ಅರ್ಹತೆ ಪಡೆದಿದ್ದು ಸಮ್ಮತಿಸಿದೆ.

24/9
ಮುಖ್ಯ ಅಭಿಯಂತರರು
ಯಲಹಂಕ ವಲಯ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

27 ಕ.ಟ.(ಆ.ಸ)

ಪಂಕ್ತಿಯ ಸಂಖ್ಯೆ

ಟಪ್ಪಣೆಗಳು ಮತ್ತು ಆಜ್ಞೆಗಳು

(28) ಕಾರ್ಯಪಾಲಕ ಅಭಿಯಂತರರು (ಯಲಹಂಕ ವಿಭಾಗ)

ಕಂಡಿಕೆ (26) ರಲ್ಲಿ ಮುಖ್ಯ ಅಭಿಯಂತರರು ಯಲಹಂಕ ವಲಯರವರು ಎಲ್-1 ಗುತ್ತಿಗೆದಾರರೊಂದಿಗೆ ದರ ಸಂದಾನ ನಡೆಸಲು ಸೂಚಿಸಿರುವ ಮೇರೆಗೆ ದಿನಾಂಕ: 23-09-2020 ರಂದು ಗುತ್ತಿಗೆದಾರರಿಗೆ ತಿಳುವಳಿಕೆ ಪತ್ರವನ್ನು ನೀಡಲಾಗಿರುತ್ತದೆ. ಅದರಂತೆ ಗುತ್ತಿಗೆದಾರರು ದಿನಾಂಕ: 25-09-2020 ರಂದು ಈ ಕಛೇರಿಗೆ ಪತ್ರ ನೀಡಿ 2018-19 ನೇ ಸಾಲಿನ ಲೋಕೋಪಯೋಗಿ ಇಲಾಖೆಯ ಅನುಮೋದಿತ ದರಗಳ ಟೆಂಡರ್ ಮೊತ್ತಕ್ಕೆ ಮೊಲಿಸಿದಾಗ ಶೇಕಡ (+)4.50% ರಷ್ಟು ಹೆಚ್ಚಿನ ದರಗಳಿಗೆ ಕಾಮಗಾರಿಯನ್ನು ನಿರ್ವಹಿಸಲು ಒಪ್ಪಿರುತ್ತಾರೆ. ವಿವರ ಈ ಕೆಳಕಂಡಂತಿರುತ್ತದೆ.

Sl No	Before Negotiation			After Negotiation		
01	ಗುತ್ತಿಗೆದಾರರು ನಮೂದಿಸಿರುವ ದರಗಳು	ಟೆಂಡರ್‌ನಿಟ್ಟ ಮೊತ್ತಕ್ಕೆ ಮೊಲಿಸಿದಾಗ ಶೇಕಡವಾರು	ದಿನಾಂಕ 01-07-2020ರ ಪರಿಷ್ಕೃತ ದರಗಳಿಗೆ ಮೋಲಿಸಿದಾಗ ಶೇಕಡ	ದರ ಸಂದಾನದ ನಂತರ ಗುತ್ತಿಗೆದಾರರು ನಮೂದಿಸಿರುವ ದರಗಳು	ಟೆಂಡರ್‌ನಿಟ್ಟ ಮೊತ್ತಕ್ಕೆ ಮೊಲಿಸಿದಾಗ ಶೇಕಡವಾರು	ದಿನಾಂಕ 01-07-2020ರ ಪರಿಷ್ಕೃತ ದರಗಳಿಗೆ ಮೋಲಿಸಿದಾಗ ಶೇಕಡ
	91,55,867.58	(+)4.50%	(+)6.76%	91,46,554.88	(+)4.50%	(+)6.65%

ಈ ಮೇಲ್ಕಂಡ ವಿವರಗಳಂತೆ ದರಸಂದಾನದ ಮೊತ್ತವಾದ ರೂ. 91,46,554.88 ಗಳಿಗೆ ಅನುಮೋದನೆ ನೀಡಲು ಕೋರಿ ಕಡತವನ್ನು ತಮ್ಮ ಮುಂದಿನ ಆದೇಶಕ್ಕಾಗಿ ಮಂಡಿಸಿದೆ.

28/09/2020

ಕಾರ್ಯಪಾಲಕ ಅಭಿಯಂತರರು
ಯಲಹಂಕ ವಿಭಾಗ

ಮುಖ್ಯ ಅಭಿಯಂತರರ ಕಛೇರಿ
SEP 2020
ಯಲಹಂಕ ವಲಯ

(29) ಅಭಿಯಂತರರು (ಯಲಹಂಕ ವಲಯ)

ಕಂಡಿಕೆ 27 ರಿಂದ 29ರವರೆಗಿನ ಕಾರ್ಯಪಾಲಕ ಅಭಿಯಂತರರು ಯಲಹಂಕ ವಿಭಾಗರವರ ವರದಿಯನ್ನು ತಮ್ಮ ಅವಗಾಹನೆಗೆ ತರುತ್ತಾ, ಇಬ್ಬರು ಗುತ್ತಿಗೆದಾರರು ಟೆಂಡರ್‌ನಲ್ಲಿ ಭಾಗವಹಿಸಿರುತ್ತಾರೆ ಗುತ್ತಿಗೆದಾರರಾದ Sri.Kothanda Raju (Sri.Charan Constructions) ನಮೂದಿಸಿರುವ ಮೊತ್ತ ರೂ9155867.58ಗಳು ಅತಿ ಕಡಿಮೆ ದರಗಳಾಗಿದ್ದು, ಟೆಂಡರ್‌ಗಿಟ್ಟ ಮೊತ್ತಕ್ಕೆ ಹೋಲಿಸಿದಾಗ ಶೇಕಡಾವಾರು(+)4.61%ರಷ್ಟು ಹೆಚ್ಚು ದರ ನಮೂದಿಸಿರುತ್ತಾರೆ. ಎಲ್-1 ಗುತ್ತಿಗೆದಾರರಾದ Sri.Kothanda Raju (Sri.Charan Constructions)ರವರೊಂದಿಗೆ ದಿನಾಂಕ:25-09-2020ರ ಗುತ್ತಿಗೆದಾರರ ಪತ್ರದಂತೆ ಸಂದಾನಿತ ಮೊತ್ತವಾದ ರೂ91,46,554.88ಳಿಗೆ ಕಾಮಗಾರಿಯನ್ನು ನಿರ್ವಹಿಸಲು ಒಪ್ಪಿಗೆ ಪತ್ರವನ್ನು ನೀಡಿರುತ್ತಾರೆ. ಸದರಿ ಗುತ್ತಿಗೆದಾರರು ಸಂದಾನಿತ ಮೊತ್ತವನ್ನು ಟೆಂಡರ್‌ಗಿಟ್ಟ ಮೊತ್ತಕ್ಕೆ ಹೋಲಿಸಿದಾಗ ಶೇ4.50%ಹೆಚ್ಚಾಗಿದ್ದು, ಎಲ್-1 ಗುತ್ತಿಗೆದಾರರು ನಮೂದಿಸಿರುವ ದರಗಳಿಗೆ ಅನುಮೋದನೆ ಕೋರಿದ್ದು ಮುಂದಿನ ಆದೇಶಕ್ಕೆ ಸಲ್ಲಿಸಿದೆ.

ಪಟ್ಟಿಕೆಯ ಸಂಖ್ಯೆ	ಟಿಪ್ಪಣಿಗಳು ಮತ್ತು ಆಜ್ಞೆಗಳು

ಕಂಡಿಕೆ (27) ಅಂಶ (3) ರ ಪ್ರಸ್ತಾವನೆಯಲ್ಲಿ ಮಾಹಿತಿಯನ್ನು ಬೇಲ್ಪಡಿಸಿ ಅನುಮತಿಯಾಗಿ ಕಂಡಿಕೆ ಸಂಖ್ಯೆಯನ್ನು ಸರಿಪಡಿಸಲಾಗಿದೆ.

ಮುಖ್ಯ ಅಭಿವೃದ್ಧಿ ಅಧಿಕಾರಿಗಳು
ಯಲಹಂಕ ನಗರಸಭೆ

ಕಡತವನ್ನು ಪರಿಶೀಲಿಸಲಾಗಿ, ಕಾರ್ಯಪಾಲಕ ಅಭಿಯಂತರರು (ಯಲಹಂಕ) ಹಾಗೂ ಮುಖ್ಯ ಅಭಿಯಂತರರು (ಯಲಹಂಕ) ರವರ ಶಿಫಾರಸ್ಸಿನಂತೆ Improvements to roads and drains at attur village and chithra layout and Surrounding are in ward-03. ಕಾಮಗಾರಿಗಳಿಗೆ 2018-19ನೇ ಸಾಲಿನ ಆಯವ್ಯಯದ ಲೆಕ್ಕಶೀರ್ಷಿಕೆ "ಪಿ-1878 ಅನುದಾನದಡಿ ಕ್ರಮವಾಗಿ ರೂ.99.00 ಲಕ್ಷಗಳಿಗೆ ಜಾಬ್ ಸಂಖ್ಯೆ:003-20-000265 ಯನ್ನು ಪಡೆಯಲಾಗಿದ್ದು, ಸದರಿ ಕಾಮಗಾರಿ ಅನುಷ್ಠಾನ ಸಂಬಂಧ e-Procurement ಪದ್ಧತಿಯಂತೆ ಟೆಂಡರ್ ಕರೆಯಲಾಗಿರುತ್ತದೆ.

ಮುಖ್ಯ ಅಭಿಯಂತರರು (ಕ/ಪ/ಮಾ) ಬೆಂಗಳೂರು ಮಹಾನಗರ ಪಾಲಿಕೆ
1655
ದಿನಾಂಕ:30/07/2020

2018-19 ನೇ ಸಾಲಿನ ಲೋಕೋಪಯೋಗಿ ಇಲಾಖೆ ದರಪಟ್ಟಿಯಂತೆ ಅಂದಾಜುಪಟ್ಟಿಯನ್ನು ತಯಾರಿಸಿ, ಸದರಿ ಅಂದಾಜು ಪಟ್ಟಿಗೆ ತಾಂತ್ರಿಕ ಮಂಜೂರಾತಿ ಹಾಗೂ ಡಿ.ಬಿ.ಎಸ್. ಅನುಮೋದನೆಯನ್ನು ಕಂಡಿಕೆ(16)ರಲ್ಲಿ ಮುಖ್ಯ ಅಭಿಯಂತರರು (ಯಲಹಂಕ)ರವರು ಅನುಮೋದನೆ ನೀಡಿರುತ್ತಾರೆ.

2. ಮುಖ್ಯ ಅಭಿಯಂತರರ ಅನುಮೋದನೆಯಂತೆ e-Procurement ಮೂಲಕ ದಿನಾಂಕ:11-08-2020ರಂದು ಟೆಂಡರ್ ಕರೆಯಲಾಗಿರುತ್ತದೆ.

3. ದಿನಾಂಕ:02-09-2020ರಂದು ಟೆಂಡರ್ ತಾಂತ್ರಿಕ ಬಿಡ್ಡನ್ನು ತೆರೆಯಲಾಗಿ ಇಬ್ಬರು ಬಿಡ್ಡುದಾರರು ಟೆಂಡರ್‌ನಲ್ಲಿ ಭಾಗವಹಿಸಿರುತ್ತಾರೆ.

1. Sri.Kothanda raju (Sri Charan Construction)
2. Sri. Venkataraju K

4. ಇಬ್ಬರು ಬಿಡ್ಡುದಾರರು ಟೆಂಡರ್‌ನಲ್ಲಿ KW-3 ರ ಪ್ರಕಾರದಲ್ಲಿ ದಾಖಲಾತಿಗಳನ್ನು ಸಲ್ಲಿಸಿದ್ದು, ತಾಂತ್ರಿಕ ಮೌಲ್ಯ ಮಾಪನದಲ್ಲಿ ಅರ್ಹತೆಹೊಂದಿರುತ್ತಾರೆ (ತಾಂತ್ರಿಕ ಮೌಲ್ಯ ಮಾಪನದ ವಿವರಗಳು ಮತ್ತು ತುಲನಾತ್ಮಕ ಪಟ್ಟಿಯನ್ನು ಕಡತದಲ್ಲಿ ಲಗತ್ತಿಸಿದೆ).

5. ಮುಖ್ಯ ಅಭಿಯಂತರರು ಕಂಡಿಕೆ 22ರಲ್ಲಿನ ಅನುಮೋದನೆಯಂತೆ ಆರ್ಥಿಕ ಬಿಡ್ ತೆರೆಯಲಾಗಿರುತ್ತದೆ ಸದರಿ ವಿವರಗಳು ಈ ಕೆಳಕಂಡಂತೆ ಇರುತ್ತದೆ.

33)

ಕ್ರ.ಸಂ	ಗುತ್ತಿಗೆದಾರರ ಹೆಸರು	ಟೆಂಡರ್ ನಿಟ್ಟ ಮೊತ್ತ ರೂ ಗಳಲ್ಲಿ	ಗುತ್ತಿಗೆದಾರರು ನಮೂದಿಸಿದ ಮೊತ್ತ (ರೂ.ಗಳಲ್ಲಿ)	ಗುತ್ತಿಗೆದಾರರು ನಮೂದಿಸಿರುವ ಮೊತ್ತಕ್ಕೆ ಹೋಲಿಸಿದಾಗ ಶೇಕಡವಾರು ಪ್ರಮಿಯಂ	ಷರಾ
1.	Sri.Kothanda raju (Sri Charan Construction)	87,52,368.04	91,55,867.58	(+)4.61% ಹೆಚ್ಚು	ಎಲ್-1
2	Sri Venkataraju K		92,58,415.71	(+)5.78% ಹೆಚ್ಚು	ಎಲ್-2

ಎಲ್-1 ಗುತ್ತಿಗೆದಾರರೊಂದಿಗೆ ದರ ಸಂದಾನ ನಡೆಸಲಾಗಿ 2018-19ನೇ ಸಾಲಿನ ಲೋಕೋಪಯೋಗಿ ಇಲಾಖೆಯ ಅನುಮೋದಿತ ದರಗಳ ಟೆಂಡರ್ ಮೊತ್ತಕ್ಕೆ ಹೋಲಿಸಿದಾಗ ಶೇ. (+4.50%) ರಷ್ಟು ಹೆಚ್ಚಿನ ದರಗಳಿಗೆ ಕಾಮಗಾರಿಯನ್ನು ನಿರ್ವಹಿಸಲು ಒಪ್ಪಿರುತ್ತಾರೆ. ಸದರಿ ವಿವರಗಳು ಈ ಕೆಳಕಂಡಂತೆ ಇರುತ್ತವೆ.

ಕ್ರ.ಸಂ	ಗುತ್ತಿಗೆದಾರರ ಹೆಸರು	ಗುತ್ತಿಗೆದಾರರು ನಮೂದಿಸಿದ ಮೊತ್ತ (ರೂ.ಗಳಲ್ಲಿ)	ದರ ಸಂದಾನದ ನಂತರ ನಮೂದಿಸಿ ಮೊತ್ತ ರೂಗಳಲ್ಲಿ	ಗುತ್ತಿಗೆದಾರರು ನಮೂದಿಸಿರುವ ಮೊತ್ತಕ್ಕೆ ಹೋಲಿಸಿದಾಗ ಶೇಕಡವಾರು ಪ್ರಮಿಯಂ	ಷರಾ
1.	Sri.Kothanda raju (Sri Charan Construction)	91,55,867.58	91,46,554.88	(+)4.50% ಹೆಚ್ಚು	ಎಲ್-1

34)

ಕಂಡಿಕೆ 10 ಮತ್ತು 11ರಲ್ಲಿನ ಅಂಶಗಳಿಗೆ ಹಾಗೂ ಈ ಕೆಳಕಂಡ ಷರತ್ತುಗೊಳಪಟ್ಟು ಮಾನ್ಯ ಆಯುಕ್ತರವರ ಅಧಿಕಾರ ಪ್ರತ್ಯಾಯೋಜನೆ ನಡವಳಿಗಳ ಸಂಖ್ಯೆ:ಬಿ12(1) ಪಿಆರ್/394/2019-2020, ದಿನಾಂಕ:25-09-2019 ರಂತೆ ಹಾಗೂ ಕಂಡಿಕೆ (31)ರಲ್ಲಿನ ಮುಖ್ಯ ಅಭಿಯಂತರರ ಶಿಫಾರಸ್ಸಿನಂತೆ, ಟೆಂಡರ್ ಅನುಮೋದನೆ ನೀಡಿದೆ.

1. ಗುತ್ತಿಗೆದಾರರು ಅವಶ್ಯಕ ದಾಖಲಾತಿಗಳನ್ನು ಇ-ಪೋರ್ಟಲ್‌ನಲ್ಲಿ ಪೂರ್ಣ ಪ್ರಮಾಣದಲ್ಲಿ ಅಪ್ಲೋಡ್ ಹಾಗೂ ಪ್ರಸ್ತಾವನೆಯಲ್ಲಿ ಕೆ.ಟಿ.ಪಿ.ಪಿ ಕಾಯ್ದೆಗೆ ವ್ಯತಿರಿಕ್ತವಾದ ಯಾವುದೇ ಅಂಶಗಳು ಇಲ್ಲದೆ ಇರುವ

ವಿಷಯ

ಪುಟದ ಸಂಖ್ಯೆ — 12 —

ಕಡತದ ಸಂಖ್ಯೆ .....

ಪಂಕ್ತಿಯ ಸಂಖ್ಯೆ	ಟಿಪ್ಪಣಿಗಳು ಮತ್ತು ಆಜ್ಞೆಗಳು
35)	ಬಗ್ಗೆ ಹಾಗೂ ಸದರಿ ಟೆಂಡರ್ ಸಂಬಂಧ ಯಾವುದೇ ಮೇಲ್ಮನವಿ ಇಲ್ಲದೇ ಇರುವ ಬಗ್ಗೆ ಕಾರ್ಯಪಾಲಕ ಅಭಿಯಂತರರು ಕಾರ್ಯಾದೇಶಪತ್ರ ನೀಡುವ ಪೂರ್ವದಲ್ಲಿ ದೃಢಪಡಿಸಿಕೊಳ್ಳುವುದು. 2. ಟೆಂಡರ್ ಅಂದಾಜು ಪಟ್ಟಿಯಂತೆ ಕಾಮಗಾರಿಯನ್ನು ಕೈಗೊಳ್ಳತಕ್ಕದ್ದು. 3. ಕಾಮಗಾರಿಯ ಗುಣಮಟ್ಟದ ಸಂಬಂಧ ಯಾವುದೇ ದೂರು ಬಂದಲ್ಲಿ ಸಂಬಂಧ ಪಟ್ಟ ಅಧಿಕಾರಿಯಾವರೇ ನೇರಜಾವಬ್ದರರಾಗುವರು. 4. ಕಾಮಗಾರಿ ಮುನ್ನ ಹಾಗೂ ನಂತರದ ಜಿ.ಪಿ.ಎಸ್ ಯುಳ್ಳ ಛಾಯಚಿತ್ರಗಳನ್ನು ಸಲ್ಲಿಸುವುದು. 5. ಕಾಮಗಾರಿ ಕೈಗೊಳ್ಳುವ ಸಂಬಂಧ ಎಲ್ಲಾ ಮುಜಾಂಗ್ಯತ ಕ್ರಮಗಳನ್ನು ಪಾಲಿಸತಕ್ಕದ್ದು. 6. ಕೆ.ಟಿ.ಪಿ.ಪಿ ಕಾಯ್ದೆರನ್ವಯ ಕಾಮಗಾರಿಯನ್ನು ನಿಯಾಮನುಸಾರ ಕೈಗೊಳ್ಳತಕ್ಕದ್ದು. ವಿ. ಮಾಯಣ್ಣ ವಿಶೇಷ ಆಯುಕ್ತರು(ಅಭ್ಯಗಳು)ಹಾಗೂ 29/1/20. ವಲಯ ಆಯುಕ್ತರು(ಯಲಹಂಕ)
36)	ಮುಖ್ಯ ಅಭಿಯಂತರರು(ಯಲಹಂಕ) C.E (Yelahanka) 29/09/2020

2019–20ನೇ ಸಾಲಿನ Soonu/Neeru Yojanr
ಯೋಜನೆಯಡಿಯಲ್ಲಿ
"Improvements to r
surrounding areas
ಕೋರಿ ಮಾನ್ಯ ವಿಶೇ
ಪಾಲಿಕೆ ರವರಿಗೆ ಕ
ಆಯುಕ್ತರು (ಯ
ನೀಡಿರುತ್ತಾರೆ.

ಕಂಡಿಕೆ ಮುಂ
11-10-2018
Rs.7,52,7
ಗುತ್ತಿಗೆದಾ
Proprie
5% ರ
Ka
ಗು

38)

07/1

Zone: